





ರಾಘು: ನಮ್ಮೂರ ಗುರುಗಳಿಗಿಂತ ನಮ್ಮೂರ ಡಾಕ್ಟರು ತುಂಬಾ ಫೇಮಸ್ಸು..!

ಸೀನ: ಅದು ಹೇಗೆ?

ರಾಘು: ನಮ್ಮೂರ ಜನಗಳಿಗೆ ಗುರುಗಳು ಮುಕ್ತಿ ತೋರಿಸಿದ್ದಕ್ಕಿಂತ ಹೆಚ್ಚು, ಡಾಕ್ಟರೇ ಮುಕ್ತಿ ತೋರಿಸಿದ್ದಾರೆ!

★★★

ಪೊಲೀಸು: ನೀವು ತುಂಬಾ ಸ್ಪೀಡಾಗಿ ಗಾಡಿ ಓಡಿಸಿದ್ದಕ್ಕೆ ದಂಡ ಕಟ್ಟಬೇಕಾಗುತ್ತೆ

ರಾಜು: ಇದೊಳ್ಳೆ ಕರ್ಮ! ಎರಡೆರಡು ಕಡೆ ದಂಡ ಕಟ್ಟೋದು!

ಪೊಲೀಸು: ಎರಡೆರಡು ಕಡೆ ಅಲ್ರೀ ಒಂದೇ ಕಡೆ

ರಾಜು: ನಾನು ಹೇಳಿದ್ದು ಅದಲ್ಲ. ಸ್ಪೀಡಾಗಿ ಓಡಿಸದೇ ನಿಧಾನವಾಗಿ ಮನೆಗೆ ಹೋದ್ರೆ ನನ್ನ ಹೆಂಡ್ತಿ ಹತ್ರ ದಂಡ ಕಟ್ಬೇಕು, ಸ್ಪೀಡಾಗಿ ಓಡಿಸಿದರೆ ನಿಮ್ಮ ಹತ್ರ ದಂಡ ಕಟ್ಬೇಕು.

–ಸುಕೇಶವ

**ಸೈಟು**

ಶಾಮರಾಯರು: 'ಮಕ್ಕಳಿಗೆ ಸೈಟು ವಗೈರೆ ಆಸ್ತಿ ಏನಾದರೂ ಉಂಟಾ?'

ಭೀಮರಾಯರು: 'ಒಂದಲ್ಲಾ ಎರಡು ಸೈಟುಗಳಿವೆ. ಒಂದು ವೆಬ್ ಸೈಟು, ಇನ್ನೊಂದು ಶಾರ್ಟ್ ಸೈಟು!

**ಧೀರ್ಘಾಯಸ್ಸು**

ಆತ: ಹೆಂಗಸರು ದೀರ್ಘಾಯಸ್ಸನ್ನು ಪಡೆದು ಸದಾ ನೆಮ್ಮದಿಯ ಜೀವನವನ್ನು ನಡೆಸುತ್ತಾರಂತೆ– ಹೌದಾ?'

ಈತ: 'ಖಂಡಿತಾ ಸತ್ಯ; ಏಕೆಂದರೆ ಅವರಿಗೆ 'ಹೆಂಡತಿಯರು ಇರುವುದಿಲ್ಲ' ಅದಕ್ಕೆ'.



**ಹಂದಿಜ್ವರ**

ಸಿಂಹ: 'ನನ್ನನ್ನು ಏನೆಂದು ತಿಳಿದೆ? ನಾನು ಗರ್ಜಿಸಿದರೆ ಕಾಡೆಲ್ಲಾ ನಡುಗುತ್ತೆ!'

ಹಂದಿ: 'ಅದೇನು ಮಹಾ? ನಾನು ಶೀನಿದರೆ ಲೋಕವೆಲ್ಲಾ ಅಲ್ಲೋಲ ಕಲ್ಲೋಲ ಆಗಿಬಿಡ್ತದೆ; ಟೀವಿ ನೋಡ್ತಾ ಇರು ಇದು ನಿನಗೇ ತಿಳಿಯುತ್ತೆ.'

–ಎ.ಕೆ.ಪಟ್ಟಾಭಿ